# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 470 |
| 2. ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ |
| 3. ಉತ್ತರಿಸಬೇಕಾದ ದಿನಾಂಕ | 11.12.2025 |
| 4. ಉತ್ತರಿಸುವ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ ಸ | ಪ್ರಶ್ನೆ | ಉತ್ತರ |
|---|---|---|
| ಅ | ವಿಜಯನಗರ ಜಿಲ್ಲೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗ್ರಾಮಗಳಿಗೆ ಅಂದಾಜು ವಿಸ್ತೀರ್ಣ 1400 ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ತಂಬ್ರಳ್ಳಿ 2ನೇ ಹಂತದ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಯೋಜನೆಯು ಈಗ ಯಾವ ಹಂತದಲ್ಲಿದೆ: ಇದಕ್ಕೆ ಸರ್ಕಾರ . ಮೀಸಲಿಟ್ಟಿರುವ ಅನುದಾನ ಎಷ್ಟು: (ಯೋಜನಾ ವರದಿಯೊಂದಿಗೆ ಮಾಹಿತಿ ಒದಗಿಸುವುದು): | ತಂಬ್ರಹಳ್ಳಿ ಏತ ನೀರಾವರಿ ಯೋಜನೆಯು 1976 ರಲ್ಲಿ ನಿರ್ಮಾಣಗೊಂಡಿದ್ದು, ಸುಮಾರು 3000.00 ಎಕರೆ ಅಚ್ಚುಕಟ್ಟು ಪ್ರದೇಶ ಹೊಂದಿರುತ್ತದೆ.<br>ಈ ಯೋಜನೆಗೆ ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ಏತ ನೀರಾವರಿ ಯೋಜನೆ ಮೂಲಕ ತಂಬ್ರಹಳ್ಳಿ, ಶೀಗೇನಹಳ್ಳಿ, ಬನ್ನಿಗೋಳ, ಚಿಲಗೋಡು ಮತ್ತು ಕೃಷ್ಣಾಪುರ ಗ್ರಾಮಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ.<br>ಸದರಿ ಯೋಜನೆಯ ಪುನರುಜ್ಜೀವನಗೊಳಿಸಲು ಪ್ರಸಕ್ತ ಸಾಲಿನಲ್ಲಿ 4702-ವಿಶೇಷ ಘಟಕ ಯೋಜನೆಯಡಿ (ಎಸ್.ಸಿ.ಪಿ) ರೂ. 250.00 ಲಕ್ಷಗಳು ಹಾಗೂ 4702-ಪ್ರಧಾನ ಕಾಮಗಾರಿಗಳು ಏ.ನೀ.ಯೋಜನೆಯಡಿಯಲ್ಲಿ ರೂ. 175.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.<br>ತಂಬ್ರಹಳ್ಳಿ ಏತ ನೀರಾವರಿ ಯೋಜನೆಯಡಿಯ ಅಚ್ಚುಕಟ್ಟಿನಲ್ಲಿ ಮನೆಗಳ ನಿರ್ಮಾಣದಿಂದ ಗ್ರಾಮಗಳ ಕಾಲೋನಿಗಳ ನಿರ್ಮಾಣದಿಂದ, ಎ.ಪಿ.ಎಂ.ಸಿ ನಿರ್ಮಾಣದಿಂದ ಸುಮಾರು 1400 ಎಕರೆ ನೀರಾವರಿ ಪ್ರದೇಶವು ಕಡಿಮೆಯಾಗಿದ್ದು, ಈ ಉಳಿತಾಯದ ಅಚ್ಚುಕಟ್ಟಿಗೆ ತಂಬ್ರಹಳ್ಳಿ ಗ್ರಾಮದ ಮೇಲ್ಭಾಗದಲ್ಲಿ ಬರುವ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ತಂಬ್ರಹಳ್ಳಿ ಎರಡನೇ ಹಂತದ ಏತ ನೀರಾವರಿ ಯೋಜನೆಯನ್ನು ನೀರೂದಗಿಸುವುದು ಯೋಜಿಸಲಾಗಿರುತ್ತದೆ.<br>ತಂಬ್ರಹಳ್ಳಿ ಏತ ನೀರಾವರಿ ಯೋಜನೆಯ ಎರಡನೇ ಹಂತದ ವಿಸ್ತೃತ ಪರ್ಯಾಯ ಪ್ರಸ್ತಾವನೆಗಳನ್ನು ಪರಮಾರ್ಶಿಸಿ ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತಗನುಗುಣವಾಗಿ ಪರಿಶೀಲಿಸಲಾಗುವುದು. |

| | | |
|---|---|---|
| ಆ | ಈ ತಂಬ್ರಳ್ಳಿ 2ನೇ ಹಂತದ ಏತನೀರಾವರಿ ಯೋಜನೆಗೆ ಒಳಪಡುವ ಹಳ್ಳಿ/ಗಾಮಗಳಾವುವು. ಈ ಏತನೀರಾವರಿ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಂಡು ಕಾಮಗಾರಿ ಅನುಷ್ಠಾನಗೊಳಿಸಲಾಗುವುದು:<br>(ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ತಂಬ್ರಳ್ಳಿ 2 ನೇ ಹಂತದ ಏತ ನೀರಾವರಿ ಯೋಜನೆಗೆ ಶಿಗೇನಹಳ್ಳಿ-1, 2, 3, ತಂಬ್ರಹಳ್ಳಿ, ತಂಬ್ರಹಳ್ಳಿ village Extensions, ಬಸರಕೋಡು ಏರಿಯಾ, ಕೃಷ್ಣಾಪುರ village and Extensions, ಕೃಷ್ಣಾಪುರ Uncommand area, ಹಾಗೂ ಚಿಲಗೋಡು ಹಳ್ಳಿ / ಗ್ರಾಮಗಳು ಒಳಪಟ್ಟಿರುತ್ತವೆ.<br><br>ಅನುದಾನದ ಲಭ್ಯತೆಯನ್ನು ಆಧರಿಸಿ ಸದರಿ ಯೋಜನೆಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು. |

MID/105/LCQ/2025

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು.